**ದಿ: 03-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

<u>ಪಾಟೀ ಸವಾಲು: ವಾದಿ ಪರ ಶ್ರೀ ಎ ವಿ ಬಿ ವಕೀಲರಿಂದ:</u>

ನಾನು ಡಿಗ್ರಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ದಾವೆಯಲ್ಲಿ 2 ನೇ ಪ್ರತಿವಾದಿ. ಪ್ರತಿವಾದಿ ನಂ. 1, 3 ಮತ್ತು 4 ರವರು ನನಗೆ ದಾವೆ ನಡೆಸಲು ಅಧಿಕಾರ ಪತ್ರ ಕೊಟ್ಟಿದ್ದಾರೆ. ಅದನ್ನು ಹಾಜರ ಪಡಿಸಿದ್ದೇನೆ. ನಾನು ಅಧಿಕಾರ ಪತ್ರವನ್ನು ಹಾಜರ ಪಡಿಲ್ಲ ಆದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ವಾದ ಪತ್ರ ಹಾಗೂ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ವಾದ ಪತ್ರದ ಬಗ್ಗೆ ನಮ್ಮ ವಕೀಲರಿಗೆ

ಮಾಹಿತಿ ನೀಡಿದ್ದೇನೆ. ವಾದ ಪತ್ರದಲ್ಲಿ ಬರೆದಿರುವುದು ಸತ್ಯವಿದೆ ಅಂದರೆ ಸರಿಯಲ್ಲ. ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಒಟ್ಟು 11 ಪುಟ 21 ಪ್ಯಾರಾ ಇರುತ್ತವೆ.

ನನಗೆ ವಾದಿಯ ಪರಿಚಯ ಇದೆ. ವಾದಿಯು ನನಗೆ ನಮ್ಮ ತಂದೆಯಿಂದ ನನಗೆ ಪರಿಚಿತ. ಸದರಿ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದ್ದೇನೆ. ವಾದಿ ನಮ್ಮ ಕುಟುಂಬದ ಎಲ್ಲ ಸದಸ್ಯರಿಗೆ ಪರಿಚಿತ. ವಾದಿ ನನ್ನ ಕುಟುಂಬದ ಜೊತೆಗೆ ಒಡನಾಟ ಹೊಂದಿದ್ದ ಅಂದರೆ ಸಾಕ್ಷಿ ಅವರ ಅಣ್ಣನಿಂದ ನಮ್ಮ ಕುಟುಂಬಕ್ಕೆ ಪರಿಚಯ ಎನ್ನುತ್ತಾರೆ. ನಮ್ಮ ತಂದೆ ರಾಜಕೀಯ ಮಾಡುತ್ತಿದ್ದರು ಅಂದರೆ ನಿಜ. ನಮ್ಮ ತಂದೆ ದಿನಾಂಕ 19.07.2021 ರಂದು ಮರಣ ಹೊಂದಿದ್ದಾರೆ. ನಮ್ಮ ತಂದೆ ರಾಜಕೀಯ ಮಾಡುತ್ತಿದ್ದುದರಿಂದ ಸಾಲ ಮಾಡಿಕೊಂಡಿದ್ದರು ಎನ್ನುವದು ಸುಳ್ಳು. ನಮ್ಮ ಕುಟುಂಬಕ್ಕೆ ಸಾಲ ಇತ್ತು ಎನ್ನುವದು ಸುಳ್ಳು. ನಮ್ಮ ಕುಟುಂಬದ ಉತಾರಗಳನ್ನು ನೋಡಿದ್ದೇನೆ. ಉತಾರಗಳಲ್ಲಿ ಬ್ಯಾಂಕ ಬೋಜಾ ಇರುತ್ತದೆ ಅಂದರೆ ನಿಜ. ಬ್ಯಾಂಕಗಳಿಂದ ಸಾಲ ಇರುತ್ತದೆ ಅಂದರೆ ನಿಜ. ನಮ್ಮ ತಂದೆ ಮರಣ ಹೊಂದಿದ ನಂತರ ಬ್ಯಾಂಕಿನವರು ಸಾಲ ತೀರಿಸುವಂತೆ ನಮ್ಮ ಮನೆಗೆ ಬಂದಿದ್ದರು ಅಂದರೆ ಸಾಕ್ಷಿ ಒಂದು ವರ್ಷದವರೆಗೆ ಬ್ಯಾಂಕಿನವರು ಯಾರು ನಮ್ಮ ಹತ್ತಿರ ಬಂದಿಲ್ಲ ಅನ್ನುತ್ತಾರೆ. ನಮ್ಮ ತಂದೆ ಖಾಸಗಿ ವ್ಯಕ್ತಿಗಳಿಂದ ಕೂಡಾ ಸಾಲ ಪಡೆದಿದ್ದರು ಎನ್ನುವದು ಸುಳ್ಳು. ಖಾಸಗಿ ಸಾಲಗಾರರು ಕೂಡಾ ನಮ್ಮ ಮನೆಗೆ ಬಂದಿದ್ದರು ಅಂದರೆ ಸರಿಯಲ್ಲ. ನಮಗೆ ಸಾಲ ಇದ್ದುದರಿಂದ ಬ್ಯಾಂಕಿನ ಸಾಲ ಹಾಗೂ ಖಾಸಗಿ ಸಾಲ ತೀರಿಸುವ ಸಲುವಾಗಿ ಪರಿಚಯಸ್ಥ ವಾದಿಗೆ ನಾವು ಜಮೀನು ಮಾರಾಟ ಮಾಡುತ್ತೇವೆ ಎಂದು ಕೇಳಿಕೊಂಡಿದ್ದೇವೆ ಎನ್ನುವದು ಸುಳ್ಳು. ವಾದಿ ನಮ್ಮ ಕುಟುಂಬಕ್ಕೆ ಪರಿಚಯಸ್ಥ ಆದ್ದರಿಂದ ನಮ್ಮ ಆಸ್ತಿಯನ್ನು ಖರೀದಿಸಲು ಒಪ್ಪಿಕೊಂಡಿದ್ದ ಎನ್ನುವದು ಸುಳ್ಳು. ಜಮೀನು ಮಾರಾಟ ಮಾಡುವ ಬಗ್ಗೆ ನಮ್ಮ ಹಾಗೂ ವಾದಿಯ ಮಧ್ಯ ಮಾತುಕತೆ ಆಗಿರುತ್ತದೆ ಅಂದರೆ ಸರಿಯಲ್ಲ. ಆ ಪ್ರಕಾರ ದಾವಾ ಆಸ್ತಿಗಳನ್ನು ಒಟ್ಟು ರೂ 25 ಲಕ್ಷಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದೆವು ಎನ್ನುವದು ಸುಳ್ಳು. ಮಾತುಕತೆ ಪ್ರಕಾರ ವಾದಿ ದಿನಾಂಕ 01.08.2021 ರಂದು ರೂ 18 ಲಕ್ಷ ಮುಂಗಡ ಹಣ ನೀಡಿದ್ದರು ಎನ್ನುವದು ಸುಳ್ಳು. ನಾವು ವಾದಿಯಿಂದ ಹಣ ಪಡೆದುಕೊಂಡು ದಿನಾಂಕ 05.08.2021 ರಂದು ಸಂಚಗಾರ ಪತ್ರ ಬರೆದುಕೊಟ್ಟಿದ್ದೇವೆ ಅಂದರೆ ಸರಿಯಲ್ಲ.

ನಾನು ಕರಾರು ಪತ್ರವನ್ನು ನೋಡಿದ್ದೇನೆ. ಅದಕ್ಕೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಕರಾರು ಪತ್ರಕ್ಕೆ ನನ್ನ ಸಹಿಗಳು ಇರುತ್ತವೆ. ಸಾಕ್ಷಿ ಮುಂದುವರೆದು ನಮ್ಮ ತಂದೆ ಮರಣ ಹೊಂದಿದ್ದು ಮುಂದಿನ ವ್ಯವಹಾರ ಮಾಡುವ ಸಲುವಾಗಿ ಮರಣ ಉತಾರ ಮಾಡಿಕೊಡುತ್ತೇನೆ ಎಂದು ವಾದಿ ಖಾಲಿ ಬಾಂಡ ಪೇಪರಗೆ ನಮ್ಮ ಊರಿನ ಎರಡು ಜನ ಹಿರಿಯರ ಸಮಕ್ಷಮ ಖಾಲಿ ಬಾಂಡಿಗೆ ಸಹಿ ಪಡೆದುಕೊಂಡಿದ್ದಾರೆಂದು ಸಾಕ್ಷಿ ಸ್ವತಃ ಹೇಳುತ್ತಾರೆ.

ನಾನು ಖಾಲಿ ಬಾಂಡಗಳಿಗೆ ಸಹಿ ಮಾಡುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮ ತಂದೆ ತೀರಿಕೊಂಡಿದ್ದರಿಂದ ದುಃಖದಲ್ಲಿ ಇದ್ದು ಸಾಕಷ್ಟು ಜನ ಬರುತ್ತಿದ್ದರು ಆದ್ದರಿಂದ ವಾದಿ ಹಾಗೂ ಅವರ ಅಣ್ಣ ಮರಣ ಉತಾರ ಮಾಡಿಕೊಡುತ್ತೇವೆ ಎಂದು ಹೇಳಿದ್ದರಿಂದ ಖಾಲಿ ಬಾಂಡಗೆ ಸಹಿ ಮಾಡಿದ್ದೇವೆ ಅನ್ನುತ್ತಾರೆ. ನಾವು ದುಃಖದಲ್ಲಿ ಇದ್ದಾಗ ನಮ್ಮ ಊರಲ್ಲಿ ಯಾರಿಗೂ ಯಾವುದೆ ದಾಖಲೆಗೆ ಸಹಿ ಮಾಡಿಕೊಟ್ಟಿಲ್ಲ.

ಮರಣ ಪ್ರಮಾಣ ಪತ್ರಕ್ಕೆ ಖಾಲಿ ಬಾಂಡ್ ಕೊಡಬೇಕು ಎನ್ನುವದು ನನಗೆ ಗೊತ್ತಿರಲಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡಾ ಈಗ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳ ಉತಾರಗಳನ್ನು ನೋಡಿದ್ದೇನೆ. ದಾವಾ ಆಸ್ತಿಗಳ ಮೇಲೆ ಯೂನಿಯನ್ ಬ್ಯಾಂಕಗೆ ಸೇರಿದ ರೂ 25 ಲಕ್ಷ, ಕೆ ವಿ ಜಿ ಬ್ಯಾಂಕಗೆ ಸೇರಿದ ಸುಮಾರು 4 ಲಕ್ಷ ಬೋಜಾ ಇರುತ್ತದೆ. ನಾನು ಬೋಜಾದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಗೆ ನಾನು ಕರಾರು ಪತ್ರ ಮಾಡಿಕೊಡುವ ಸಮಯದಲ್ಲಿ ಬೋಜಾ ತೀರಿಸಿದ ನಂತರ ಕ್ರಯ ಪತ್ರ ಮಾಡಿಕೊಡುತ್ತೇನೆಂದು ಒಪ್ಪಿಕೊಂಡಿದ್ದೇವೆ ಎನ್ನುವದು ಸುಳ್ಳು. ನಮ್ಮ ತಂದೆ ಮರಣ ಹೊಂದಿದ ನಂತರ ಉತಾರಗಳಲ್ಲಿ ನಮ್ಮ ತಂದೆ ಹೆಸರನ್ನು ಕಡಿಮೆ ಮಾಡಿ ನಮ್ಮ ಹೆಸರುಗಳನ್ನು ದಾಖಲಿಸಕೊಂಡ ನಂತರ ವಾದಿ ತನ್ನ ಹೆಸರಿಗೆ ಕ್ರಯ ಪತ್ರ ಮಾಡಿಕೊಡುವಂತೆ ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು ಎನ್ನುವದು ಸುಳ್ಳು. ನಾವು ಇಂದು ನಾಳೆ ಮಾಡಿಕೊಡುತ್ತೇವೆ ಎಂದು ಹೇಳುತ್ತಾ ಕಾಲ ಮುಂದೂಡುತ್ತಾ ಬಂದಿರುತ್ತೇವೆ ಎನ್ನುವದು ಸುಳ್ಳು. ವಾದಿಗೆ ನಾವು ಸುಳ್ಳು ಆಶ್ವಾಸನೆ ಕೊಡುತ್ತಾ ಮುಂದೂಡುತ್ತಾ ಬಂದಿರುತ್ತೇವೆ ಅಂದರೆ ಸರಿಯಲ್ಲ. ನಾವು ವಾದಿಗೆ ಮೋಸ ಮಾಡಿ ದಾವಾ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡುವ ಪ್ರಯತ್ನದಲ್ಲಿ ಇದ್ದೆವು ಅಂದರೆ ಸರಿಯಲ್ಲ.

ವಾದಿ ನಮಗೆ ದಿನಾಂಕ 19.07.2024 ರಂದು ನೋಟೀಸ ಕೊಟ್ಟಿರುತ್ತಾರೆ ಅಂದರೆ ನಿಜ. ಅದನ್ನು ದಿನಾಂಕ 20.07.2024 ರಂದು ಪಡೆದುಕೊಂಡಿದ್ದೇವೆ ಅಂದರೆ ನಿಜ. ವಾದಿ ನೀಡಿದ ನೋಟೀಸಗೆ ನಾವು ಪ್ರತ್ಯುತ್ತರ ಕೊಟ್ಟಿಲ್ಲ, ಸಾಕ್ಷಿ ಮುಂದುವರೆದು ಈ ಬಗ್ಗೆ ಹಿರಿಯರ ಮುಂದೆ ವಿಷಯ ಹೇಳಿದ್ದು ಪೋಲೀಸರಿಗೆ ದೂರು ಕೊಡುವುದಾಗಿ ಹೇಳಿದ್ದು ವಾದಿ ಮುಂದುವರೆಯಲು ಎಂದು ಹೇಳಿದ್ದರಿಂದ ನಾನು ಯಾವುದೆ ಕ್ರಮ ಜರುಗಿಸಿಲ್ಲ ಅನ್ನುತ್ತಾರೆ. ವಾದಿ ನೋಟೀಸ ನೀಡಿದ ಬಗ್ಗೆ ನಾವು ಹಿರಿಯರನ್ನು ಭೇಟಿ ಆಗಿ ವಿಷಯ ಹೇಳಿ ದೂರು ನೀಡಲು ಯೋಚಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನೋಟೀಸ ನೀಡಿದ ನಂತರ ವಾದಿ ದಾವೆ ಸಲ್ಲಿಸಿದ್ದಾರೆ ಅಂದರೆ ನಿಜ. ವಾದಿಯ ವಿರುದ್ಧ ಯಾವುದೆ ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ. ಕರಾರು ಪತ್ರ ನ್ಯಾಯುತ ಹಾಗೂ ಕಾನೂನು ಬದ್ಧ ದಾಖಲೆ

ಆಗಿರುವುದರಿಂದ ನಾವು ಈ ಬಗ್ಗೆ ಯಾವುದೆ ಕ್ರಮ ಜರುಗಿಸಿಲ್ಲ ಅಂದರೆ ಸರಿಯಲ್ಲ. ವಾದಿ ನೋಟೀಸ ನೀಡಿದ ನಂತರ ನಾವು ಹಿರಿಯರನ್ನು ಭೇಟಿ ಆದ ಬಗ್ಗೆ ನಮೂದಿಸಿದ್ದೇನೆ ಆದರೆ ಯಾರು ಹಿರಿಯರು ಎಂದು ನಮೂದಿಸಿಲ್ಲ ಅಂದರೆ ನಿಜ. ಯಾವುದೆ ಹಿರಿಯರ ಸಮಕ್ಷಮ ನಾವು ಹೋಗಿಲ್ಲ ಆದ್ದರಿಂದ ಈ ಬಗ್ಗೆ ನಮ್ಮ ತಕರಾರಿನಲ್ಲಿ ತಿಳಿಸಿಲ್ಲ ಅಂದರೆ ಸರಿಯಲ್ಲ. ವಾದಿ ಖೊಟ್ಟಿ ದಾವೆ ದಾಖಲಿಸಿದ್ದರಿಂದ ಯಾವುದೆ ಕ್ರಮ ಜರುಗಿಸಿಲ್ಲ. ಕರಾರು ಪತ್ರ ಕಾನೂನು ಬದ್ಧ ದಾಖಲೆ ಆದ್ದರಿಂದ ಯಾವುದೆ ಕ್ರಮ ಜರುಗಿಸಿಲ್ಲ ಎನ್ನುವದು ಸುಳ್ಳು.

ವಾದಿ ನಮ್ಮನ್ನು ಭೇಟಿ ಆಗಿ ಬಾಕಿ ಉಳಿದ ರೂ 7 ಲಕ್ಷ ಹಣ ನಾನು ಬೇರೆಯವರಿಂದ ಪಡೆದುಕೊಂಡು ಇಟ್ಟುಕೊಂಡಿದ್ದೇನೆ ಅದನ್ನು ತೆಗೆದುಕೊಂಡು ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದ್ದ ಅನ್ನುವದು ಸುಳ್ಳು. ದಾವೆ ಸಲ್ಲಿಸಿದ ನಂತರ ಸಮನ್ಸ ಜೊತೆಗೆ ಕರಾರು ಪತ್ರ, ದಾಖಲೆಗಳು ಬಂದಿದ್ದವು ಅಂದರೆ ನಿಜ. ನಾನು ಅವುಗಳನ್ನು ಓದಿ ನೋಡಿದ್ದೇನೆ. ಅದರ ಮೇಲೆ ಯಾರ ಯಾರ ಸಹಿಗಳು ಇವೆ ಎಂದು ನೋಡಿದ್ದೇನೆ. ನಮ್ಮ 4 ಜನರ ಸಹಿಗಳು ಇದ್ದವು ಅಂದರೆ ನಿಜ. ಖರೀದಿದಾರ ವಾದಿಯ ಸಹಿ ಇತ್ತು ಅಂದರೆ ಸಾಕ್ಷಿ ನಂತರ ತನ್ನ ಸಹಿಯನ್ನು ವಾದಿ ಸೃಷ್ಟಿಸಿದ್ದಾರೆ ಅನ್ನುತ್ತಾರೆ. ಕರಾರು ಪತ್ರಕ್ಕೆ ವಾದಿಯ ಸಹಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕರಾರು ಪತ್ರದ ಮೇಲೆ ಬೇರೆ ಯಾರ ಸಹಿಗಳು ಇದ್ದವುಎನ್ನುವದು ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ ಬರುವುದಿಲ್ಲ. ನನ ಪ್ರತಿವಾದ ಪತ್ರ ಇಂಗ್ಲೀಷನಲ್ಲಿ ಇರುತ್ತದೆ. ಇಂಗ್ಲೀಷನಲ್ಲಿ ಇರುವ ಕೆಲವು ಶಬ್ದಗಳು ನನಗೆ ಅರ್ಥವಾಗುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿಯ ಕೆಲವು ಶಬ್ದಗಳ ಬಗ್ಗೆ ನಮ್ಮ ವಕೀಲರನ್ನು ವಿಚಾರಿಸಿಲ್ಲ. ನ್ಯಾಯಾಲಯದಿಂದ ಬಂದ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನಮ್ಮ ವಕೀಲರು ದಾಖಲೆಗಳು ಸರಿ ಇವೆ ಎಂದು ಹೇಳಿದ್ದಾರೆ. ದಾಖಲೆಗಳ ಪ್ರಕಾರ ವಕೀಲರು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ. ನಾನು ನೀಡಿದ ಮಾಹಿತಿ ಮೇರೆಗೆ ಪ್ರತಿವಾದ ಪತ್ರ ತಯಾರಿಸಿದ್ದಾರೆ. ಕರಾರು ಪತ್ರದಲ್ಲಿ ಸಾಕ್ಷಿದಾರರ ಸಹಿ ಇಲ್ಲ ಎಂದು ನಮ್ಮ ವಕೀಲರಿಗೆ ತಿಳಿಸಿದ್ದೇನೆ. ನ್ಯಾಯಾಲಯದಿಂದ ಬಂದ ದಾಖಲೆಗಳು ಸುಳ್ಳು ಇವೆ ಎಂದು ನಮ್ಮ ಪ್ರತಿವಾದ ಪತ್ರರದಲ್ಲಿ ತಿಳಿಸಿದ್ದೇನೆ ಬಾಂಡ ಮೇಲೆ ಸಾಕ್ಷಿದಾರರ ಸಹಿಗಳು ಇರಲಿಲ್ಲ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಈ ಬಗ್ಗೆ ನ್ಯಾಯಾಲಯದ ಗಮನಕ್ಕೆ ಅರ್ಜಿ ಸಲ್ಲಿಸಿ ತಂದಿರುವುದು ನನಗೆ ಗೊತ್ತಿಲ್ಲ. ಈ ಬಗ್ಗೆ ನಮ್ಮ ವಕೀಲರನ್ನು ವಿಚಾರಿಸಿದ್ದು ನ್ಯಾಯಾಲಯದಿಂದ ಬಂದ ದಾಖಲೆಗಳನ್ನು ನಮ್ಮ ವಕೀಲರು ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದಾರೆ. ಸುಳ್ಳು ಸಾಕ್ಷಿ ಹೇಳಿದರೆ ಏನಾಗುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ನಾನು ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಪಿ-1 ರ ದಾಖಲೆ ನಮ್ಮ ಮನೆಗೆ ಬಂದಿತ್ತು ಅಂದರೆ ನಿಜ. ಸಾಕ್ಷಿ ಪುನಃ ನಮ್ಮ ಮನೆಗೆ ಬಂದ ದಾಖಲೆಗಳಲ್ಲಿ ಸಾಕ್ಷಿದಾರರ ಸಹಿಗಳು ಇರಲಿಲ್ಲ ಅನ್ನುತ್ತಾರೆ. ನಿಪಿ-1 ರಲ್ಲಿ ನಮ್ಮ ಸಹಿಗಳು ಇರುತ್ತವೆ. ನಿಪಿ-1 ರಲ್ಲಿರುವ ವಾದಿಯ ಸಹಿ ತೋರಿಸಲಾಗಿ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಅನ್ನುತ್ತಾರೆ. ವಾದಿಯಿಂದ ರೂ 18 ಲಕ್ಷ ಹಣ ಪಡೆದುಕೊಂಡು ದಾವಾ ಆಸ್ತಿಗಳ ಮೇಲೆ ಇರುವ ಬೋಜಾ ಕಡಿಮೆ ಮಾಡಿಕೊಂಡಿಲ್ಲ ಅಂದರೆ ಸಾಕ್ಷಿ ನಾವು ಅವರಿಂದ ಯಾವುದೆ ಹಣ ಪಡೆದುಕೊಂಡಿಲ್ಲ ಅನ್ನುತ್ತಾರೆ.

ವಾದಿ ಕಾನೂನು ಬದ್ಧವಾಗಿ ದುಡಿದು ನಮಗೆ ರೂ 18 ಲಕ್ಷ ಹಣ ಮುಂಗಡವಾಗಿ ಪಾವತಿಸಿದ್ದಾರೆ ಅಂದರೆ ಸರಿಯಲ್ಲ. ಬಾಕಿ ಉಳಿದ ರೂ 7 ಲಕ್ಷ ಹಣ ಪಡೆದುಕೊಂಡು ಕ್ರಯ ಪತ್ರ ಮಾಡಿಕೊಡುವಂತೆ ವಾದಿ ನಮ್ಮನ್ನು ಕೇಳಿದ್ದರು ಅಂದರೆ ಸರಿಯಲ್ಲ. 2022 ರಲ್ಲಿ ನಮ್ಮ ತಂದೆ ಹೆಸರನ್ನು ಉತಾರಗಳಿಂದ ಕಡಿಮೆ ಮಾಡಿಕೊಂಡಿದ್ದೇವೆ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಮ್ಮ ತಂದೆ ಹೇಸರನ್ನು ಬೇಗನೆ ಉತಾರಗಳಿಂದ ಕಡಿಮೆ ಮಾಡಿಕೊಂಡಿರಲಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ರಾಜಕೀಯ ಪ್ರಭಾವ ವ್ಯಕ್ತಿ ಸಾಲ ಮಾಡಿಕೊಂಡಿಲ್ಲ ಎಂದು ತಿಳಿಸಿದ್ದೇನೆ ಅಂದರೆ ಸಾಕ್ಷಿ ಬ್ಯಾಂಕಿನಲ್ಲಿ ಸಾಲ ಹೊರತು ಪಡಿಸಿ ಬೇರೆ ಯಾವುದೆ ಸಾಲ ಇರಲಿಲ್ಲ ಅನ್ನುತ್ತಾರೆ. ಬ್ಯಾಂಕಿನ ಜೊತೆಗೆ ಕೊಡುವ ಹಾಗೂ ತೆಗೆದುಕೊಳ್ಳುವ ವ್ಯವಹಾರ ಮಾಡುತ್ತಿದ್ದೆವು. ಬ್ಯಾಂಕಿನ ಸಾಲವನ್ನು ತೀರಿಸಿದ್ದೇವೆ ಆದರೆ ಎಷ್ಟು ಎಂದು ಹೇಳಲು ಬರುವುದಿಲ್ಲ. ನಮಗೆ ಯಾವುದೆ ಬೇರೆ ಆದಾಯದ ಮೂಲಗಳು ಇರುವುದಿಲ್ಲ ಆದ್ದರಿಂದ ವಾದಿ ನೀಡಿದ ಹಣವನ್ನು ಕೊಟ್ಟು ಸಾಲ ತೀರಿಸಿದ್ದೇವೆ ಅಂದರೆ ಸರಿಯಲ್ಲ. ಪೆಟ್ರೋಲ್ ಪಂಪ ನಮ್ಮ ತಾಯಿ ಹೆಸರಿನಲ್ಲಿ ಇರುತ್ತದೆ. ನಮ್ಮ ಕುಟುಂಬಕ್ಕೆ ಸುಮಾರು 25 ರಿಂದ 30 ಲಕ್ಷ ಸಾಲ ಇರಬಹುದು. ಒಟ್ಟು ರೂ 78,00,000/- ಚಿಲ್ಲರೆ ಸಾಲ ಇರುತ್ತದೆ ಅಂದರೆ ಸಾಕ್ಷಿ ಎಷ್ಟು ಇರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಅನ್ನುತ್ತಾರೆ. ನನಗೆ ಸತ್ಯಸಂಗತಿಗಳು ಗೊತ್ತಿದ್ದರೂ ಕೂಡಾ ಉದ್ದೇಶಪೂರ್ವಕವಾಗಿ ನಿರಾಕರಿಸುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಕುಟುಂಬದ ಆದಾಯದ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿಲ್ಲ. ನಮ್ಮ ಕುಟುಂಬಕ್ಕೆ ಯಾವುದೆ ಆದಾಯ ಇರುವುದಿಲ್ಲ ಆದ್ದರಿಂದ ನಾವು ಸಾಕಷ್ಟು ಜನರಿಂದ ಸಾಲ ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಸಾಲದ ಸಲುವಾಗಿ ಬೇರೆ ಆಸ್ತಿಗಳನ್ನು ಮಾರಾಟ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ.

ಸರ್ವೆ ನಂ 9 ರ ಜಮೀನನ್ನು ಮಾರಾಟ ಮಾಡಿದ್ದೇವೆ ಅಂದರೆ ನಿಜ. ನಮ್ಮ ತಂದೆಯ ಬ್ಯಾಂಕಿನ ಸಾಲ ತೀರಿಸುವ ಸಲುವಾಗಿ ಬ್ಯಾಂಕಿನಿಂದ ನೋಟೀಸ ಬಂದಿದ್ದರಿಂದ ಜಮೀನು ಮಾರಾಟ ಮಾಡಿದ್ದೇವೆ. ಅದೇ ರೀತಿ ಸದರಿ ಜಮೀನು ಗುಡ್ಡಪ್ರದೇಶದಲ್ಲಿ ಇರುವುದರಿಂದ ಅದನ್ನು ಸಾಗುವಳಿ ಮಾಡುವುದಿಲ್ಲ ಆದ್ದರಿಂದ ಮಾರಾಟ ಮಾಡಿದ್ದೇವೆ ಅನ್ನುತ್ತಾರೆ. ಪಹಣಿ

ಪತ್ರಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ಸದರಿ ಜಮೀನನ್ನು ಎಷ್ಟು ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ ಎನ್ನುವದು ನನಗೆ ಗೊತ್ತಿಲ್ಲ ನಮ್ಮ ಹೀರಿಯರಿಗೆ ಗೊತ್ತು. ನಾನು ನಮ್ಮ ತಂದೆಯ ಹಿರಿ ಮಗ ಅಂದರೆ ನಿಜ. ನಮ್ಮ ಮನೆ ವ್ಯವಹಾರಗಳನ್ನು ನಾನೆ ನೋಡಿಕೊಳ್ಳುತ್ತೇನೆ. ನಮ್ಮ ತಂದೆ ಮರಣ ಹೊಂದಿದ ನಂತರ ನಮ್ಮ ಕುಟುಂಬಕ್ಕೆ ಎಷ್ಟು ಸಾಲ ಇತ್ತು, ಯಾರಿಗೆ ಎಷ್ಟು ಸಾಲ ಕೊಡಬೇಕಾಗಿತ್ತು ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ 9 ರ ಜಮೀನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿದೆ. ಮಾರಾಟದ ಹಣವನ್ನು ನಾವು ಪಡೆದುಕೊಂಡು ಬ್ಯಾಂಕಿಗೆ ಕಟ್ಟಿದ್ದೇವೆ ಎಷ್ಟು ಹಣ ಎಂದು ಗೊತ್ತಿಲ್ಲ. ಹಣವನ್ನು ನಾವು ಎನಿಸಿಲ್ಲ. ಮನೆಯಲ್ಲಿ ಹಿರಿಯರು ಇದ್ದುದರಿಂದ ನಮ್ಮ ದೊಡ್ಡಪ್ಪ ಹಾಗೂ ಇತರರು ಇದ್ದುದರಿಂದ ನಾನು ಹಣ ಎನಿಸಿಲ್ಲ. ನಮ್ಮ ತಂದೆಯ ಆಪ್ತ ಅಶೋಕ ಗುಮ್ಮಗೋಳ, ಗಂಗಪ್ಪ ಮಾನೆ. ಸರ್ವೆ ನಂ 9 ರ ಖರೀದಿ ಪತ್ರಕ್ಕೆ ಅಶೋಕ ಗುಮ್ಮಗೋಳ ಸಾಕ್ಷಿ ಎಂದು ಸಹಿ ಮಾಡಿದ್ದಾರೆ. ಇನ್ನೊಬ್ಬರು ಸಹಿ ಮಾಡಿಲ್ಲ. ಜಮೀನನ್ನು ಎಷ್ಟು ಬೆಲೆಗೆ ಮಾರಾಟ ಮಾಡಿದ್ದೇವೆ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಕೂಡಾ ಉದ್ದೇಶಪೂರ್ವಕವಾಗಿ ಮರೆಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅದರೆ ಸರಿಯಲ್ಲ. ಸರ್ವೆ ನಂ 9 ರ ಜಮೀನು ಮಾರಾಟ ಮಾಡಿದಂತೆ ದಾವಾ ಆಸ್ತಿಗಳನ್ನು ಕೂಡಾ ವಾದಿಗೆ ಮಾರಾಟ ಮಾಡಿ ಕೊಡುವ ಬಗ್ಗೆ ಕರಾರು ಪತ್ರ ಮಾಡಿಕೊಟ್ಟಿದ್ದೇವೆ ಅಂದರೆ ಸರಿಯಲ್ಲ.

ದಾವಾ ಆಸ್ತಿಗಳ ಒಂದು ಎಕರೆ ಮೌಲ್ಯ ರೂ 30 ರಿಂದ 40 ಲಕ್ಷ. ಮುಖ್ಯ ರಸ್ತೆಯಿಂದ ಸ್ವಲ್ಪ ಒಳಗೆ ಜಮೀನು ಇದ್ದರೆ ಅದರ ಮೌಲ್ಯ 3 ರಿಂದ 4 ಲಕ್ಷ ರೂ ಕಡಿಮೆ ಆಗುತ್ತದೆ. ದಾವಾ ಆಸ್ತಿಗಳು ಮುಖ್ಯ ರಸ್ತೆಗೆ ಹೊಂದಿಕೊಂಡಿಲ್ಲ ಆದರೆ ಜಿಲ್ಲಾ ಹೆದ್ದಾರಿಗೆ ಹೊಂದಿಕೊಂಡಿವೆ. ಆಗಿನ ಮಾರುಕಟ್ಟೆ ಮೌಲ್ಯದ ಪ್ರಕಾರ ದಾವಾ ಆಸ್ತಿಗಳನ್ನು ರೂ 25 ಲಕ್ಷಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದಲ್ಲಿ ಪ್ರತಿವಾದ ಪತ್ರದ 11 ನೇ ಪ್ಯಾರಾದಲ್ಲಿ Alleged sale deed ಎಂದು ಬರೆದಿರುವ ದಾಖಲೆ ಇರುವುದಿಲ್ಲ ಅಂದರೆ ಸಾಕ್ಷಿ ನಾವು ಯಾವುದೆ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಅನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿದಂತೆ ನನ್ನ ವಕೀಲರಿಗೆ ಮಾಹಿತಿ ನೀಡುವ ಸಮಯದಲ್ಲಿ ಯಾವುದೆ ಕ್ರಯ ಪತ್ರ ಇರಲಿಲ್ಲ. ಕ್ರಯ ಪತ್ರದ ಬಗ್ಗೆ ನಾನು ಮಾಹಿತಿ ನೀಡಿಲ್ಲ.

ನಾವು ವಾರಸಾ ಪ್ರಮಾಣ ಪತ್ರ ಪಡೆದಿದ್ದೇವೆ ದಿನಾಂಕ ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿದ 2-3 ತಿಂಗಳ ನಂತರ ವಾರಸಾ ಪ್ರಮಾಣ ಪತ್ರ ಪಡೆದಿದ್ದೇವೆ. ಆ ಸಮಯದಲ್ಲಿ ಯಾವ ದಾಖಲೆಗಳನ್ನು ಕೊಟ್ಟಿದ್ದೆವು ನೆನಪಿಲ್ಲ. ವಾರಸಾ ಪ್ರಮಾಣ ಪತ್ರವನ್ನು ಯಾರು ಮಾಡಿಸಿಕೊಟ್ಟಿದ್ದಾರೆ ನೆನಪಿಲ್ಲ. ಮರಣ ಪ್ರಮಾಣ ಪತ್ರವನ್ನು ಯಾರು

ಮಾಡಿಸಿಕೊಟ್ಟಿದ್ದಾರೆ ಎಂದು ಸ್ವತಃ ಹೇಳುತ್ತಾರೆ. ಆ ಸಮಯದಲ್ಲಿ ಯಾವ ಯಾವ ದಾಖಲೆಗಳಿಗೆ ಎಲ್ಲಿ ಎಲ್ಲಿ ಸಹಿ ಮಾಡಿದ್ದೇನೆ ನೆನಪಿಲ್ಲ. ಯಾರಿಗೆ ಯಾವ ದಾಖಲೆಗಳನ್ನು ಕೊಟ್ಟಿದ್ದೇನೆ ಎನ್ನುವದು ನೆನಪಿಲ್ಲ. ವಾದಿಗೆ ಮಾತ್ರ ಬಾಂಡ್ ಕೊಟ್ಟಿದ್ದೇನೆ. ಬೇರೆ ಯಾರಿಗೂ ಕೊಟ್ಟಿಲ್ಲ. ನಮ್ಮ ಹಿರಿಯರು ವಾರಸಾ ಪ್ರಮಾಣ ಪತ್ರವನ್ನು ಮಾಡಿಸಿದ್ದಾರೆ. ಮರಣ ಪ್ರಮಾಣ ಪತ್ರವನ್ನು ಮಾಡಿಸಿಕೊಡುವ ಜವಾಬ್ದಾರಿಯನ್ನು ವಾದಿ ವಹಿಸಿಕೊಂಡಿದ್ದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾನು ಎಲ್ಲಾ ಸಂಗತಿಗಳನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆಯ ಮರಣ ಪ್ರಮಾಣ ಪತ್ರ ಹಾಗೂ ವಾದಿಗೆ ಯಾವುದೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ವಾರಸಾ ಪ್ರಮಾಣ ಪತ್ರ ಪಡೆಯಲು ಮರಣ ಪ್ರಮಾಣ ಪತ್ರ, ಪಂಚರ ಸಹಿ ಮಾಡಿ ಗ್ರಾಮ ಲೆಕ್ಕಾಧಿಕಾರಿಗೆ ನೀಡಬೇಕಾಗುತ್ತದೆ ಅಂದರೆ ನಿಜ. ವಾರಸಾ ಪ್ರಮಾಣ ಪತ್ರ ಪಡೆಯಲು ತಹಶೀಲ್ದಾರರಿಗೆ ಸಲ್ಲಿಸಿದ್ದೇನೆ ಅಂದರೆ ನಿಜ. ನಾವು ಎಲ್ಲಾ ದಾಖಲೆ ನೀಡಿದ ನಂತರ ವಾರಸಾ ಪ್ರಮಾಣ ಪತ್ರ ಪಡೆದಿದ್ದೇವೆ ಅಂದರೆ ಸಾಕ್ಷಿ ವಾರಸಾ ಪ್ರಮಾಣ ಪತ್ರ ಮರಣ ಪ್ರಮಾಣ ಪತ್ರ ಮಾಡಿಸುವ ಜವಬ್ದಾರಿ ವಾದಿ ಮೇಲೆ ಇತ್ತು ಅನ್ನುತ್ತಾರೆ. ವಾರಸಾ ಪ್ರಮಾಣ ಪತ್ರ ಮಾಡಲು ಗ್ರಾಮ ಲೆಕ್ಕಾಧಿಕಾರಿ ಮನೆಗೆ ಬಂದು ಪಂಚರ ಸಹಿ ಪಡೆದುಕೊಳ್ಳುತ್ತಾರೆ ಅನ್ನುವದು ನನಗೆ ನೆನಪಿಲ್ಲ. ನನಗೆ ಎಲ್ಲಾ ವಿಷಯ ನೆನಪಿದ್ದರೂ ಕೂಡಾ ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ವಾದಿ ನಮಗೆ ನೋಟೀಸ ನೀಡಿದ ನಂತರ ನಾವು ಸುಳ್ಳು ಕಾರಣಗಳನ್ನು ನಮೂದಿಸಿ ಪ್ರತಿವಾದ ಪತ್ರ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಕಾನೂನು ಬದ್ಧ ಕರಾರು ಪತ್ರ ಮಾಡಿಕೊಟ್ಟು ವಾದಿಯಿಂದ ಹಣ ಪಡೆದುಕೊಂಡಿದ್ದರೂ ಕೂಡಾ ಆತನಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಸಹಿ ಮಾಡಿದ ಸಾಕ್ಷಿದಾರರು ನಮ್ಮ ಊರಿನವರು ಅಲ್ಲ ಎಂದು ನನ್ನ ತಕರಾರಿನಲ್ಲಿ ತಿಳಿಸಿರುವುದು ಸುಳ್ಳು. ಸಾಕ್ಷಿದಾರರು ಯಾವ ಊರಿನವರು ನನಗೆ ಗೊತ್ತಿಲ್ಲ. ನಮ್ಮ ಊರು ಗಳಗಿ. ಗಂಬ್ಯಾಪೂರ ಕಲಘಟಗಿ ತಾಲೂಕಿನಲ್ಲಿ ಇದೆ. ಸಾಕ್ಷಿದಾರರು ನಮ್ಮ ಪರಿಚಿತರು ಅಂದರೆ ಸರಿಯಲ್ಲ. ಸದರಿಯವರ ಪರಿಚಯ ಇದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಹೊಲದ ಪಕ್ಕ ಮಲ್ಲಿಕಾರ್ಜುನ ಗುರುಸಿದ್ದಯ್ಯ ಹಿರೇಮಠ ಇವರ ಜಮೀನು ಇದೆ ಎನ್ನುವದು ಸುಳ್ಳು. ಸರ್ವೆ ನಂ 39 ರಲ್ಲಿ ಒಂದು ಎಕರೆ ಜಮೀನನ್ನು ಮಾರಾಟ ಮಾಡಿದ್ದೇವೆ ಅಂದರೆ ನಿಜ. ಊತಾರನ್ನು ನೋಡಿ ಸಾಕ್ಷಿ ಗುರಿತಿಸಿದ್ದು ಅದನ್ನುನಿಪಿ-17 ಎಂದು ಗುರುತಿಸಲಾಯಿತು. ನಾವು ಸಾಲದ ಸಲುವಾಗಿ ನಮ್ಮ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡುತ್ತಾ ಬಂದಿರುತ್ತೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಸಾಲದ ಸಲುವಾಗಿ

ಮಾರಾಟ ಮಾಡಲು ಕರಾರು ಪತ್ರ ಮಾಡಿಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೌಲ್ಯ ಹೆಚ್ಚಾಗಿದ್ದರಿಂದ ಬೇರೆಯವರಿಗೆ ಮಾರಾಟ ಮಾಡಲು ಉದ್ದೇಶಿಸಿ ವಾದಿಗೆ ಮೋಸ ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ. 2021 ರಲ್ಲಿ ಆಸ್ತಿ ಮೌಲ್ಯ ರೂ 25 ಲಕ್ಷ ಮಾತ್ರ ಇತ್ತು ಅಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿದ ಸತ್ಯಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ, ನಾನು ನೋಡಿಲ್ಲ. ಮರಣ ಪ್ರಮಾಣ ಪತ್ರ ಪಡೆಯಲು ಬಾಂಡಗೆ ಸಹಿ ಮಾಡಿ ಕೊಡಬೇಕಾಗುತ್ತದೆ ಎಂದು ಖೊಟ್ಟಿ ಕತೆ ಸೃಷ್ಟಿಸಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ವಾದಿಯಿಂದ ಹಣ ಪಡೆದುಕೊಂಡು ಎಣಿಸಿ ಇಟ್ಟುಕೊಂಡಿದ್ದೇವೆ ಅಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಂಗತಿಗಳನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ಕರಾರು ಪತ್ರದ ಪ್ರಕಾರ ನಾವು ವಾದಿಗೆ ಜಮೀನು ಮಾರಾಟ ಮಾಡಲು ಬಾಧ್ಯಸ್ಥರು ಅಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಿ ಹಣ ಕಬಳಿಸುವ ಸಲುವಾಗಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿ ಇಂದಿಗೂ ಕೂಡಾ ಬಾಕಿ ಉಳಿದ ಹಣ ಕೊಟ್ಟು ಖರೀದಿ ಪತ್ರ ಮಾಡಿಕೊಳ್ಳಲು ಸಿದ್ಧರಿರುತ್ತಾರೆ ಎಂದರೆ ಸಾಕ್ಷಿ ನಾವು ಯಾವುದೆ ವ್ಯವಹಾರ ಮಾಡಿಲ್ಲ ಅನ್ನುತ್ತಾರೆ. ನಾವು ಹಾಜರ ಪಡಿಸಿದ ದಾಖಲೆಗಳಲ್ಲಿ ಉಳಿದ ಪ್ರತಿವಾದಿಯರು ನೀಡಿದ ಅಧಿಕಾರ ಪತ್ರ ಇರುವುದಿಲ್ಲ ಅಂದರೆ ನಿಜ. ಉಳಿದ ಪ್ರತಿವಾದಿಯರಿಗೆ ಸತ್ಯ ಸಂಗತಿ ಗೊತ್ತಿರುವುದರಿಂದ ನನಗೆ ಯಾವುದೆ ಅಧಿಕಾರಿ ಪತ್ರ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**